ಯಾರಿಗೂ ಕೂಡ ಪ್ರಯೋಜನವಾಗುವುದಿಲ್ಲ. ಸುಮಾರು ಐದು ಡೆಂಟಲ್ ಕಾಲೇಜುಗಳಲ್ಲಿ ಈ ಪ್ರಾಬ್ಲಮ್ ಇದೆ.

ಡಾ: ಎಂ. ಶಂಕರ್‌ನಾಯಕ್:- ಸನ್ಮಾನ್ಯ ಅಧ್ಯಕ್ಷರೇ, ಈಗ ಡೆಂಟಲ್ ಕಾಲೇಜುಗಳಲ್ಲಿ ಗೊಂದಲವಿರುವ ಬಗ್ಗೆ ನಾವು ದಿನನಿತ್ಯ ವೃತ್ತ ಪತ್ರಿಕೆಗಳಲ್ಲಿ ನೋಡುತ್ತಿದ್ದೇವೆ. ಅದರಲ್ಲಿ ರೆಕಗನೈಸ್ ಆಗಿರುವ ಮತ್ತು ರೆಕಗನೈಸ್ ಆಗದೇ ಇರತಕ್ಕ ಬೇರೆ ಬೇರೆ ಕಾಲೇಜುಗಳಿವೆ. ವಿದ್ಯಾರ್ಥಿಗಳಿಗೆ ಸಿ.ಇ.ಟಿ. ಮುಖಾಂತರ ಸೀಟು ಅಲಾಟ್ ಆಗಿದೆ. ಆದರೆ ವಿದ್ಯಾರ್ಥಿಗಳು ಅನ್‌ರೆಕಗನೈಜ್ ಕಾಲೇಜಿನಲ್ಲಿ ಹೋಗಿ ಅಡ್ಮಿಷನ್ ಮಾಡಿಕೊಳ್ಳಲಿಕ್ಕೆ ತಯಾರಿಲ್ಲ. ಸಿ.ಇ.ಟಿ.ಯಿಂದ ಅವರಿಗೆ ಸೀಟು ಅಲಾಟ್ ಆದರೂ ಸಹ ಅಲ್ಲಿಗೆ ಹೋಗಿ ಅವರು ಅಡ್ಮಿಷನ್ ಆಗಿಲ್ಲ. ಅದು ಯಾವ ಯಾವ ಕಾಲೇಜಿನಲ್ಲಿ ಎಷ್ಟೆಷ್ಟು ಸೀಟುಗಳು ಉಳಿದಿವೆ ಎಂಬ ಮಾಹಿತಿಯನ್ನು ನಾವು ತರಿಸುತ್ತಿದ್ದೇವೆ. ಇವತ್ತು ಅಥವಾ ನಾಳೆ ಏನಾದರೂ ಆ ಮಾಹಿತಿ ಬಂದರೆ, ಆ ಮ್ಯಾನೇಜ್‌ಮೆಂಟ್ ಅವರನ್ನು ಕರೆದು ಎಷ್ಟು ಸೀಟುಗಳು ಉಳಿದಿವೆಯೋ ಅದನ್ನು ತುಂಬಿಸಲಿಕ್ಕೆ ಪ್ರಯತ್ನ ಮಾಡುತ್ತೇವೆ. ಸರ್ಕಾರ ವತಿಯಿಂದ ಅಂತೂ ಸಿ.ಇ.ಟಿ. ಕೌನ್ಸಲಿಂಗ್ ಪೂರ್ತಿ ಮುಗಿದಿದೆ, ಕಳೆದ ತಿಂಗಳು 28ಕ್ಕೆ ಅದು ಮುಗಿಯಿತು, ಉಳಿದಿರತಕ್ಕಂತಹ ಸೀಟುಗಳನ್ನು ನಾವು 4-5 ದಿವಸ ಕಾಲಾವಕಾಶ ಕೊಟ್ಟು ಯೂನಿವರ್ಸಿಟಿಯಿಂದ ಮ್ಯಾನೇಜ್‌ಮೆಂಟ್‌ನವರು ತುಂಬಲಿಕ್ಕೆ ಹೇಳುತ್ತೇವೆ. ಏಕೆಂದರೆ ಮ್ಯಾನೇಜ್‌ಮೆಂಟ್‌ನವರಿಗೆ ಲಾಸ್ ಆಗುತ್ತದೆ. ಸೀಟು ತುಂಬಲಿಲ್ಲ ಅಂದರೆ ಟ್ಯೂಷನ್ ಫೀ ಅವರಿಗೆ ಸಿಗುವುದಿಲ್ಲ, ಇದರಿಂದ ಮ್ಯಾನೇಜ್‌ಮೆಂಟ್‌ನವರಿಗೆ ಬಹಳ ಕಷ್ಟವಾಗುತ್ತದೆ. ಆ ಒಂದು ಉದ್ದೇಶದಿಂದ ನಾವು ಆ ಕಡೆಗೆ ಗಮನ ಹರಿಸಿದ್ದೇವೆ. ಆ ಮಾಹಿತಿ ಬಂದ ನಂತರ ತೀರ್ಮಾನ ತೆಗೆದುಕೊಳ್ಳುತ್ತೇವೆ.

ಆ. ಕೆ.ಜಿ.ಎಫ್. ಪುರಸಭೆಯಲ್ಲಿ ದುರಾಡಳಿತ ಹಾಗು ಭ್ರಷ್ಟಾಚಾರ.

ಶ್ರೀ ಎಸ್. ರಾಜೇಂದ್ರನ್ (ಕೆ.ಜಿ.ಎಫ್. ಕ್ಷೇತ್ರ):- ಮಾನ್ಯ ಉಪಾಧ್ಯಕ್ಷರೇ, ಕೆ.ಜಿ.ಎಫ್. ಪುರಸಭೆಯಲ್ಲಿನ ದುರಾಡಳಿತ ಹಾಗೂ ಭ್ರಷ್ಟಾಚಾರದಿಂದಾಗಿ ಸಾರ್ವಜನಿಕರಿಗೆ ಉಂಟಾಗಿರುವ ತೊಂದರೆಯ ಬಗ್ಗೆ ನಾನು ಮಾನ್ಯ ಪೌರಾಡಳಿತ ರಾಜ್ಯಮಂತ್ರಿಯವರ ಗಮನ ಸೆಳೆಯುತ್ತೇನೆ.

ಶ್ರೀ ಮಿರಾಜುದ್ದೀನ ಪಟೇಲ್ (ಪೌರಾಡಳಿತ ರಾಜ್ಯ ಸಚಿವರು):- ಮಾನ್ಯ ಉಪಾಧ್ಯಕ್ಷರೇ,

" Mal-administration and corruption in the K.G.F. City Municipality, this resulting in harrassment and inconvenience to the public of K.G.F. Town".

ಈ ಮೇಲಿನ ಪ್ರಶ್ನೆಗೆ ಉತ್ತರ ತರಿಸಲು ಕೋಲಾರ ಜಿಲ್ಲೆಯ ಜಿಲ್ಲಾಧಿಕಾರಿ ಅವರನ್ನು ಕೋರಲಾಗಿದ್ದು ಜಿಲ್ಲಾಧಿಕಾರಿ ಅವರು ಸದರಿ ಪ್ರಶ್ನೆಯು ಸಾಮಾನ್ಯ ಸ್ವರೂಪದಾಗಿದ್ದು ಈ ಪ್ರಶ್ನೆ ನಿರ್ದಿಷ್ಟವಾದ ಪ್ರಶ್ನೆ ಆಗಿಲ್ಲದ ಕಾರಣ ಉತ್ತರ ಸಲ್ಲಿಸಲು ಅಸಾಧ್ಯವಾಗಿದೆಯೆಂದು ತಿಳಿಸಿರುತ್ತಾರೆ.

ಕೆ.ಜಿ.ಎಫ್. ನಗರ ಸಭೆಯ ಅಧ್ಯಕ್ಷರು, ಉಪಾಧ್ಯಕ್ಷರು, ಸದಸ್ಯರುಗಳು ಅಥವಾ ಅಧಿಕಾರಿ: ಸಿಬ್ಬಂದಿಯವರು ದುರಾಡಳಿತ ಮತ್ತು ಭ್ರಷ್ಟಾಚಾರ ನಡೆಸಿ, ಕೆ.ಜಿ.ಎಫ್. ಪಟ್ಟಣದ ಸಾರ್ವಜನಿಕರಿಗೆ ಅನಾನುಕೂಲ ಮಾಡಿ ದೌರ್ಜನ್ಯವನ್ನು ಯಾರು ಮಾಡಿದ್ದಾರೆ ಎಂದು ನಿರ್ದಿಷ್ಟವಾಗಿ ಆರೋಪದ

ಪ್ರಶ್ನೆಯನ್ನು ಮಾನ್ಯ ಶಾಸಕರು ಸಲ್ಲಿಸಿದ್ದಾರೆ. ಅಂತಹ ಆರೋಪದ ಬಗ್ಗೆ ಸೂಕ್ತ ತನಿಖೆ ನಡೆಸಿ ಅಂತಹವರ ಮೇಲೆ ನಿಯಮದ ಪ್ರಕಾರ ಶಿಸ್ತಿನ ಕ್ರಮ ತೆಗೆದುಕೊಳ್ಳಲು ಪರಿಶೀಲಿಸಲಾಗುವುದು.

ಶ್ರೀ ಎಸ್. ರಾಜೇಂದ್ರನ್:- ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಸಚಿವರು ನೀವು ಸ್ಪೆಸಿಫಿಕ್ಕಾಗಿ ಏನೂ ಕೊಟ್ಟಿಲ್ಲ ಎಂದು ನನ್ನನ್ನೇ ಕೇಳುತ್ತಿದ್ದಾರಲ್ಲ. ಮಾಲ್-ಅಡ್ಮಿನಿಸ್ಟ್ರೇಷನ್ ಮುನಿಸಿಪಾಲಿಟಿಯಲ್ಲಿ ನಡೆಯುತ್ತಿದೆ; A to Z ನಿಮ್ಮ ಅಡ್ಮಿನಿಸ್ಟ್ರೇಷನ್ ಸರಿಯಿಲ್ಲ; ಅಲ್ಲಿ ಕೊಲೆ ಮಾಡಿದ್ದಾರೆ; ಲ್ಯಾಂಡ್ ಟ್ರಾಪ್ ಆಗಿದೆ; ಬೋಗಸ್ ಖಾತಾ ಇದೆ, ಬೋಗಸ್ ಎನ್.ಓ.ಸಿ. ಇದೆ, ಇವೆಲ್ಲವುಗಳ ಬಗ್ಗೆ ನನ್ನ ಹತ್ತಿರ ಓರಿಜಿನಲ್ ಡ್ಯಾಕ್ಯುಮೆಂಟ್ಸ್ ಇಟ್ಟುಕೊಂಡಿರುತ್ತೇನೆ. ಸ್ಪೆಸಿಫಿಕ್ಕಾಗಿ ಹೇಳಿ ಎಂದರೆ ಹೇಗೆ? ಯಾವುದರ ಬಗ್ಗೆ ಸ್ಪೆಸಿಫಿಕ್ಕಾಗಿ ಹೇಳಬೇಕು ಮಾನ್ಯ ಮಂತ್ರಿಗಳು ಕೇಳಿದರೆ ನಾನು ಅದಕ್ಕೆ ಉತ್ತರ ಕೊಡುತ್ತೇನೆ.

ಶ್ರೀ ಮಿರಾಜುದ್ದೀನ್ ಪಟೇಲ್:- ಮಾನ್ಯ ಅಧ್ಯಕ್ಷರೇ, ಸ್ಪೆಸಿಫಿಕ್ ಅಂದರೆ ಯಾವ ಆಫೀಸರ್, ಅಥವಾ ಚೀಫ್ ಆಫೀಸರೋ ಅಥವಾ ಬೇರೆ ಯಾರು ಅಕೌಂಟ್ಸ್ ಆಫೀಸರೋ, ಯಾರು ಎಲ್ಲಿ ಏನು ತಪ್ಪು ಮಾಡಿದ್ದಾರೋ ಎಂಬುದು ಸರ್ಕಾರದ ಗಮನಕ್ಕೆ ಬಂದಿಲ್ಲ. ಅಂತಹದೇನಾದರೂ ತಪ್ಪನ್ನು ಅಧ್ಯಕ್ಷರು, ಉಪಾಧ್ಯಕ್ಷರು, ಚೀಫ್ ಆಫೀಸರ್ ಯಾರಾದರೂ ಮಾಡಿದ್ದ ದಾಖಲೆ ತಮ್ಮ ಬಳಿ ಇದ್ದಲ್ಲಿ ಅದನ್ನು ನಮಗೆ ಕಳುಹಿಸಿಕೊಡಿ. ತಕ್ಷಣವೇ ಅಂತಹವರ ಮೇಲೆ ತನಿಖೆ ಮಾಡಿ ನಾವು ಕ್ರಮ ಕೈಗೊಳ್ಳುತ್ತೇವೆ.

ಶ್ರೀ ಎಸ್. ರಾಜೇಂದ್ರನ್:- ಮಾನ್ಯ ಉಪಾಧ್ಯಕ್ಷರೆ, ಅದಕ್ಕೆ ಸಂಬಂಧಿಸಿದ ದಾಖಲೆ ನಾನು ಈಗಾಗಲೇ ಕಳುಹಿಸಿದ್ದೇನೆ. ಅದರ ಡೇಟ್ 10.10.96, ಇವತ್ತು 1997ನೇ ಇಸವಿಯಾಗಿದೆ, ಆದರೂ ಅದಕ್ಕೆ ಉತ್ತರ ಬಂದಿಲ್ಲ. ಮುನಿಸಿಪಲ್ ಕೌನ್ಸಿಲ್ ಒಬ್ಬರು ಈ ಕೆಳಕಂಡ ಮಾಹಿತಿಗಳನ್ನು ತಮಗೆ ಕಳುಹಿಸುವಂತೆ ಪುರಸಭೆಯವರನ್ನು ಕೇಳಿದ್ದರು. One about the approved plan of Annaswamy Layout and another about Chandragiri Layout. ಇದಕ್ಕೊಂದು ಮುನಿಸಿಪಾಲಿಟಿಯವರಿಂದ ಮಾಹಿತಿ ಕೌನ್ಸಿಲರಿಗೆ ಕಳುಹಿಸಿಕೊಟ್ಟಿಲ್ಲ. ಯಾವ ಅಧಿಕಾರಿಯನ್ನು ನಾವು ಹೋಗಿ ಕೇಳುವುದು? ಪ್ಲಾನ್ ಲೇ ಔಟ್ ಅಪ್ರೂವ್ ಆಗಿರುವುದು ಕೂಡಿ ಎಂದು ಕೌನ್ಸಿಲರ್ ಕೇಳಿದರೆ, ಅದಕ್ಕೆ ಅವರಿಗೆ ಉತ್ತರವೇ ಪುರಸಭೆಯಿಂದ ಸಿಕ್ಕಿಲ್ಲ. ಕೋಲಾರದ ಜಿಲ್ಲಾಧಿಕಾರಿಯವರನ್ನೇನಾದರೂ ನಾವು ಕೆ.ಜಿ.ಎಫ್. ಪುರಸಭೆಯಲ್ಲಿ ಈ ರೀತಿಯಾಗಿದೆ, ಅವರ ಅಡ್ಮಿನಿಸ್ಟ್ರೇಷನ್ ಸರಿಯಲ್ಲ ಅಂದರೆ ಡಿ.ಸಿ. ಯವರು you go to the Director, I am no way connected ಎಂದು ಹೇಳಿದ್ದಾರೆ. But the same D.C. has passed an order to the municipality to deposit Rs. 10 lakhs in a particular bank viz., Vysya Bank which is not located in the KGF constituency and which is not even a scheduled nationalised bank. What special interest the DC has got to instruct the municipality to deposit the amount in Vysya Bank? Is it not violation of your administration?

ಉಪಾಧ್ಯಕ್ಷರು:- ಮಾನ್ಯ ಸಚಿವರು ಮಾನ್ಯ ಶಾಸಕರು ಕೇಳಿದಂತೆ ಒಳ್ಳೆಯ ಚೀಫ್ ಆಫೀಸರ್‌ರನ್ನು ಕೆ.ಜಿ.ಎಫ್. ಪುರಸಭೆಗೆ ಪೋಸ್ಟಿಂಗ್ ಮಾಡಿ ಕೊಡಿ.

ಶ್ರೀ ಮಿರಾಜುದ್ದೀನ್ ಎನ್. ಪಟೇಲ್:- ಸನ್ಮಾನ್ಯ ಉಪಾಧ್ಯಕ್ಷರೇ, ಈಗ ಅಲ್ಲಿರತಕ್ಕ ಚೀಫ್ ಆಫೀಸರ್ ಅಲ್ಲೆ ಇರಬೇಕೆಂದು ಸರ್ಕಾರದ ಇಚ್ಛೆಯೇನು ಇಲ್ಲ. ಯಾವ ಚೀಫ್ ಆಫೀಸರ್ ಬೇಕಾದರೂ ಅಲ್ಲಿ ತರಲಿ. ಮಾನ್ಯ ಶಾಸಕರು ಹೇಳಿದ ಪ್ರಕಾರ ಏನಾದರೂ ಚಾರ್ಜಸ್ ಇದ್ದರೆ, ಅವರ ವಿರುದ್ಧ ತನಿಖೆ ಮಾಡಿಸಿ ಚಾರ್ಜಸ್ ಪ್ರೂವ್ ಆದರೆ ಅವರ ಮೇಲೆ ಲೀಗಲ್ ಆ್ಯಕ್ಷನ್ ತೆಗೆದುಕೊಳ್ಳುತ್ತೇವೆ. ಮಾನ್ಯ ಶಾಸಕರು ದಾಖಲೆಗಳನ್ನು ನಮಗೆ ಕಳುಹಿಸಕೊಡಲಿ.

ಶ್ರೀ ಎಸ್. ರಾಜೇಂದ್ರನ್:- ಮಾನ್ಯ ಉಪಾಧ್ಯಕ್ಷರೇ, ನಾವು ಇಲ್ಲಿ ಏನು ಕೇಳಿದರೂ ಮಾನ್ಯ ಸಚಿವರು 'ನಾವು ವಿಚಾರ ಮಾಡುತ್ತೇವೆ'; ತಾವು ನೋಡುತ್ತೇವೆ, ಎನ್ನುವ ಉತ್ತರ ಹೇಳುತ್ತಾರೆ. ನಾವು ಮಾಡುತ್ತೇವೆ, ಎನ್ನುವ ಪ್ರಶ್ನೆಯೇ ಇಲ್ಲಿಲ್ಲ. ಒಬ್ಬ ಒಳ್ಳೆಯ ಕಮೀಷನರ್ ಅನ್ನು ನಮ್ಮ ಕೆ.ಜಿ.ಎಫ್.ಗೆ ಕೊಡಬೇಕು.

4.20 ಪಿ.ಎಂ.

ಅಡ್ಮಿನಿಸ್ಟ್ರೇಷನ್ ಚೆನ್ನಾಗಿ ಇರಬೇಕೆಂದು ನಾನು ಕೋಲಾರ ಜಿಲ್ಲೆಯ ಇನ್‌ಛಾರ್ಜ್ ಮಂತ್ರಿಗಳಾದ ಸನ್ಮಾನ್ಯ ಬೈರೇಗೌಡರನ್ನು ಕೇಳಿದ್ದಕೋಸ್ಕರ ಅವರು ಫರ್‌ಫೆಕ್ಟಾಗಿ ಅಡ್ಮಿನಿಸ್ಟ್ರೇಷನ್ ಮಾಡತಕ್ಕ ಸ್ಟೈಟ್ ಫಾರ್ವರ್ಡ್ ಆಗಿರುವಂಥ ಅಧಿಕಾರಿಯ ಬಗ್ಗೆ ಲೆಟರ್ ಬರೆದು ಸಂಬಂಧಪಟ್ಟ ಮಂತ್ರಿಗಳಿಗೆ ಕಳುಹಿಸಿದ್ದಾರೆ. ಆ ಅಧಿಕಾರಿಯನ್ನು ಹಾಕಿದ ಮೂರೇ ದಿವಸಗಳಲ್ಲಿ ಅವರನ್ನು ಟ್ರಾನ್ಸ್‌ಫರ್ ಮಾಡಿದ್ದಾರೆ. You have sent him. If you have provided the same Officer the administration would have been perfect. ಹಾಗೆ ಮಾಡಿದ್ದರೆ, ಕೊಲೆ ಮಾಡುವುದಕ್ಕೆ ಅವಕಾಶ ಆಗುತ್ತಾ ಇರಲಿಲ್ಲ. ಮುನಿಸಿಪಾಲಿಟಿ ಕಾಂಪೌಂಡ್‌ನಲ್ಲಿ ಮುನಿಸಿಪಲ್ ಕೌನ್ಸಿಲರ ಮರಡರ್ ಆಗಿದ್ದಾರೆ. It is a lack of administration on your part. ಮುನಿಸಿಪಾಲಿಟಿಯನ್ನು ಸೂಪರ್‌ಸೀಡ್ ಮಾಡಿ ಅಲ್ಲಿ ಒಳ್ಳೆಯ ಅಡ್ಮಿನಿಸ್ಟ್ರೇಟರ್‌ನ್ನು ಹಾಕಿ ಅಂದರೆ ವಿಚಾರ ಮಾಡುತ್ತೇನೆ, ನೋಡುತ್ತೇನೆ ಅಂದರೆ ಯಾವಾಗ ವಿಚಾರ ಮಾಡುತ್ತೀರಿ? ಈಗಾಗಲೇ ಎರಡು ವರ್ಷ ಆಗಿದೆ:

Nothing you have done in the municipal administration. Bogus Khatha is there, number of documents are there. Even after my writing to the Minister and to the Secretary several times, no action has been taken. Bogus NOC is there. I will produce that here itself. I have the original document, they have written NOC, mentioning the Commissioner, a bogus signature is there. ಪೋಲೀಸ್ ಕೇಸ್ ಆಗಿದೆ, ಅಲೆಕ್ಸನ್ ಮತ್ತು ಅವರ ಜೊತೆಯಲ್ಲಿ ಮೂರು ಜನರನ್ನು ಅರೆಸ್ಟ್ ಮಾಡಿದ್ದೀರಿ,

for having produced bogus documents in Municipality, on the complaint of Municipal Commissioner. ಮುನಿಸಿಪಾಲಿಟಿ ಅಡ್‌ಮಿನಿಸ್ಟ್ರೇಷನ್ ಯಾವ ತರಹ ಇದೆ ನೋಡಿ.

ಶ್ರೀ ಮಿರಾಜುದ್ದೀನ್ ಪಟೇಲ್:- (ಪೌರಾಡಳಿತ ಸಚಿವರು):- ಮಾನ್ಯ ಅಧ್ಯಕ್ಷರೆ, ಶಾಸಕರು ಹೇಳಿದ ಪ್ರಕಾರ ಚೀಫ್ ಆಫೀಸರ್ ಬದಲಾವಣೆ ಮಾಡಿದ್ದೇವೆ, ಅಲ್ಲಿನ ಅಧ್ಯಕ್ಷರು, ಕೌನ್ಸಿಲ್‌ರವರು ಕೋರ್ಟಿಗೆ ಹೋಗಿ ಆ ಬಗ್ಗೆ ಸ್ಟೇ ಆರ್ಡರ್ ತಂದಿರುವ ಕಾರಣದಿಂದ ಅದು ಕ್ಯಾನ್ಸಲ್ ಆಗಿದೆ. ಆದರೆ ನೀವು ಹೇಳಿದ ಪ್ರಕಾರ ನಾವು ಮಾಡಿದ್ದೇವೆ, ಮತ್ತೇನಾದರೂ ಇದ್ದರೆ ತಾವು ಕೊಡಿ, ಎನ್‌ಕ್ವಯರಿ ಮಾಡಿಸಿ ಕ್ರಮ ಕೈಗೊಳ್ಳುತ್ತೇನೆ.

ಶ್ರೀ ಎನ್. ರಾಜೇಂದ್ರನ್:- ಸ್ವಾಮಿ ಮುನಿಸಿಪಾಲಿಟಿ ಸೂಪರ್‌ಸೀಡ್ ಮಾಡಬೇಕು, ಒಳ್ಳೆಯ ಅಡ್ಮಿನಿಸ್ಟ್ರೇಟರ್‌ನ್ನು ಹಾಕಬೇಕು ಆ ಕೆಲಸವನ್ನು ಮಾಡುತ್ತೀರಾ? If you give me a specific answer, Than I will take the seat, I need not mention all those things here. ಏಕೆಂದರೆ, ನಾನು ಬಹಳ ನೋವಿನಿಂದ ಹೇಳುತ್ತಿದ್ದೇನೆ ಸ್ವಾಮಿ, ಎಷ್ಟೋಸಲ ಹೇಳಿದ್ದೇನೆ.. ಮುನಿಸಿಪಲ್ ಅಡ್ಮಿನಿಸ್ಟ್ರೇಷನ್‌ನವರಿಗೆ ಹೇಳಿದ್ದೇನೆ, ಮಂತ್ರಿಯವರಿಗೆ ಹೇಳಿದ್ದೇನೆ, ಮುನಿಸಿಪಲ್ ಕಮೀಷನ್‌ರವರಿಗೆ ಹೇಳಿದ್ದೇನೆ. They have not provided any shelter to this Legislator. ನೀವು ಪಕ್ಷ ಮಾತ್ರ ನೋಡಿಬಿಟ್ಟು, ಅವರು ಹೇಳಿದ ತಕ್ಷಣ ಟ್ರಾನ್ಸ್‌ಫರ್ ಮಾಡುತ್ತೀರಿ. ನಾವು ಪಕ್ಷದವರಲ್ಲವೇ? ಅವರು ಕೇಳಿದ ತಕ್ಷಣ ರೂಲಿಂಗ್ ಎಂ.ಎಲ್.ಎ. ಎಂದು ಮಾಡುತ್ತೀರಿ. ನಾವು ರೂಲಿಂಗ್‌ನಿಂದ ಹೊರಗಡೆ ಇದ್ದೇವಾ? You must be perfect, you must be honest, you must be cooperative to the legislators also. ಸನ್ಮಾನ್ಯ ಮುಖ್ಯಮಂತ್ರಿಗಳು ಏನು ಹೇಳಿದ್ದರು? ಶಾಸಕರು ಬರೀ ಟ್ರಾನ್ಸ್‌ಫರ್ ಮಾಡಿಕೊಂಡು ಹೋದರೆ ಚೆನ್ನಾಗಿರುವುದಿಲ್ಲ, ಅಡ್ಮಿನಿಸ್ಟ್ರೇಷನ್ ಯಾವರೀತಿ ಇರಬೇಕು, ಅದು ಜನರಿಗೆ ಗೊತ್ತಾಗಬೇಕೆಂದು ಹೇಳಿದರು. ಈಗ ಅಡ್‌ಮಿನಿಸ್ಟ್ರೇಷನ್ ಯಾವರೀತಿ ಮಾಡಬೇಕೆಂದು ನನಗೆ ಗೊತ್ತಾಗಬೇಕಾ ಅಥವಾ ಮಂತ್ರಿಯವರಿಗೆ ಗೊತ್ತಾಗಬೇಕಾ, ಅದು ಹೇಳಿ ಸ್ವಾಮಿ.

ಉಪಾಧ್ಯಕ್ಷರು:- ಈಗ ತಾವು ಅವರು ಹೇಳಿದ್ದನ್ನು ಪರಿಶೀಲನೆ ಮಾಡಿ ತಪ್ಪು ಇದ್ದರೆ ಅವರ ಮೇಲೆ ಕ್ರಮ ತೆಗೆದುಕೊಂಡು ಸರಿಮಾಡಿಸಿರಿ.

ಶ್ರೀ ಮಿರಾಜುದ್ದೀನ್ ಪಾಟೀಲ್:- ಇನ್ನು 15 ದಿವಸದಲ್ಲಿ ನಾನು ಡಿಪಾರ್ಟ್‌ಮೆಂಟಿನಿಂದ ವಿವರ ತರಸಿ, ಯಾರು ತಪ್ಪು ಮಾಡಿದ್ದಾರೆ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಎನ್. ರಾಜೇಂದ್ರನ್:- ದಯವಿಟ್ಟು Let him post a good Administrator there. ಹನುಮಂತಪ್ಪ ಎನ್ನುವ ಒಳ್ಳೆಯ ಅಧಿಕಾರಿಯನ್ನು ನಮ್ಮ ಜಿಲ್ಲೆಯ ಇನ್‌ಚಾರ್ಜ್ ಮಂತ್ರಿಗಳು ಹೇಳಿದಕ್ಕೋಸ್ಕರ ಅವರನ್ನು ಮೂರು ದಿವಸದಲ್ಲಿ ಟ್ರಾನ್ಸ್‌ಫರ್ ಮಾಡಿದ್ದೀರಿ. ಅಂಥ ಒಳ್ಳೆಯ ಅಧಿಕಾರಿ ಇದ್ದಿದ್ದರೆ, ಮಾಲ್ ಪ್ರಾಕ್ಟಿಸ್ ಕೆ.ಜಿ.ಎಫ್. ನಲ್ಲಿ ಆಗುತ್ತಿರಲಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಸ್ವಾಮಿ, ಅವರು ಕೇಳುವುದಿಷ್ಟೇ ಒಳ್ಳೆಯ ಅಧಿಕಾರಿಯನ್ನು ಕೇಳಿದರೂ ಕೊಡುತ್ತಿಲ್ಲ. ಸರಿಯಾಗಿ ಆಡಳಿತ ನಡೆಸುವುದಕ್ಕೆ ಒಳ್ಳೆಯ ಅಧಿಕಾರಿಯನ್ನು ಕೊಡುವುದಕ್ಕೆ ಆಗದಿದ್ದರೆ, ಸೂಪರ್‌ಸೀಡ್ ಮಾಡಿ ಅಡ್‌ಮಿನಿಸ್ಟ್ರೇಟರನ್ನೂ ಹಾಕಿ ಎಂದು ಕೇಳಿದ್ದಾರೆ. ಅದೂ ಮಾಡುವುದಿಲ್ಲ, ಒಳ್ಳೆಯ ಅಧಿಕಾರಿಯನ್ನು ಕೊಡುವುದಿಲ್ಲ ಅಂದರೆ ಹೇಗೆ?

ಉಪಾಧ್ಯಕ್ಷರು:- ಮಾಡುತ್ತೇವೆ ಎಂದು ಹೇಳಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಎಷ್ಟು ದಿವಸದಲ್ಲಿ?

ಉಪಾಧ್ಯಕ್ಷರು:- 15 ದಿವಸ ಟೈಮ್ ತೆಗೆದುಕೊಂಡಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ನಾಲ್ಕು ಸಲ ಮುಖ್ಯಮಂತ್ರಿಯವರ ಹತ್ತಿರ ಹೋಗಿದ್ದಾರೆ, ಮತ್ತು ಎರಡು ಮೂರು ಸಾರಿ ಇವರ ಹತ್ತಿರ ಹೋಗಿದ್ದಾರೆ. ಹತ್ತು ಸಾರಿ ಒಬ್ಬ ಅಧಿಕಾರಿ ಟ್ರಾನ್ಸ್‌ಫರ್‌ಗೆ ಹೋಗಬೇಕೆಂದರೆ ಏನು ಇದು? ಇದು ಅವರ ಕರ್ತವ್ಯ ಅಲ್ಲವೆ? ಸರ್ಕಾರದ ಕರ್ತವ್ಯ ಅಲ್ಲವೆ?

ಶ್ರೀ ಜಿ.ವಿ. ಶ್ರೀರಾಮ ರೆಡ್ಡಿ:- ಒಬ್ಬರು ಒಳ್ಳೆಯ ಅಧಿಕಾರಿಯನ್ನು ಕೆ.ಜಿ.ಎಫ್.ಗೆ ಹಾಕಿದರು. ಮೂರೇ ದಿವಸದಲ್ಲಿ ಅವರನ್ನು ಟ್ರಾನ್ಸ್‌ಫರ್ ಮಾಡಿದರು. ಏತಕ್ಕೆ ಎಂದು ಗೊತ್ತಿಲ್ಲ. ಅವರ ಸಮಸ್ಯೆ ಏನೆಂದರೆ ಆ ಆಫೀಸರ್ ಅಲ್ಲೇ ಇದ್ದಿದ್ದರೆ, ಒಬ್ಬ ಕೌನ್ಸಿಲರ್ ಕೊಲೆ ಆಗುತ್ತಿರಲಿಲ್ಲ. ಗಲಾಟೆ ಆಗುತ್ತಿರಲಿಲ್ಲ. ಅಡ್ಮಿನಿಸ್ಟ್ರೇಷನ್ ಚೆನ್ನಾಗಿರುತ್ತಿತ್ತು. ಹಾಕಿದ ಮೂರು ದಿವಸಕ್ಕೆ ಒಬ್ಬ ಒಳ್ಳೆಯ ಆಫೀಸರನ್ನು ಏತಕ್ಕೆ ತೆಗೆದಿರಿ? ಇದರ ಹಿಂದೆ ಏನು ಇದೆ. ಈ ಎಲ್ಲಾ ಪರಿಣಾಮಗಳಿಂದ ಕೆ.ಜಿ.ಎಫ್‌ನಲ್ಲಿ ಮುನಿಸಿಪಲ್ ಅಡ್ಮಿನಿಸ್ಟ್ರೇಷನ್ ಪೂರ್ತಿ ಕೊಲಾಪ್ಸ್ ಆಗಿದೆ. ಇದಕ್ಕೆ ಏನು ಕ್ರಮ ತೆಗೆದುಕೊಳ್ಳುತ್ತಿದ್ದೀರಿ ಎಂದು ಅವರು ಕೇಳುತ್ತಿದ್ದಾರೆ.

ಉಪಾಧ್ಯಕ್ಷರು:- ಶ್ರೀರಾಮ ರೆಡ್ಡಿಯವರೇ ಮಂತ್ರಿಗಳು 15 ದಿವಸದೊಳಗಾಗಿ ಕ್ರಮ ತೆಗೆದುಕೊಳ್ಳುತ್ತೇನೆ ಎಂದು ಹೇಳಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- 15 ದಿವಸ ಏತಕ್ಕೆ?

ಶ್ರೀ ಸಿ.ಆರ್. ಸಗೀರ್ ಅಹ್ಮದ್:- ಮಾನ್ಯ ಅಧ್ಯಕ್ಷರೆ....

ಉಪಾಧ್ಯಕ್ಷರು:- ಮಂತ್ರಿಗಳು ಉತ್ತರ ಕೊಡುತ್ತಾರೆ ಸಗೀರ್ ಅಹಮದ್ ಅವರೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ:- ಮುನಿಸಿಪಲ್ ಅಡ್ಮಿನಿಸ್ಟ್ರೇಷನ್ ಅಲ್ಲಿ ಒಂದೇ ಕಡೆ ಅಲ್ಲ. ಎಲ್ಲಾ ಕಡೆಯೂ ಇದೇ ಪರಿಸ್ಥಿತಿ ಬಂದಿದೆ. ಒಂದು ಕಾಗದಕ್ಕೆ ಉತ್ತರ ಬರುವುದು ಎರಡು ವರ್ಷ ಆಗುತ್ತದೆ. ಸಾಮಾನ್ಯ ಕೆಲಸ ಈತರಹ ಆಗಿಬಿಟ್ಟರೆ ಮುನಿಸಿಪಲ್ ಅಡ್ಮಿನಿಸ್ಟ್ರೇಷನ್ ಸಿವಿಕ್ ಅಮೆನಿಟೀಸ್ ಬಗ್ಗೆ ಏನು ಮಾತನಾಡುವುದು?

ಉಪಾಧ್ಯಕ್ಷರು:- ತಾವು ರಾಜ್ಯಪಾಲರ ಭಾಷಣದ ಮೇಲೆ ಮಾತನಾಡಿ. ಅವರು ಗಮನ ಸೆಳೆಯುವ ಸೂಚನೆ ತಂದಿದ್ದಾರೆ. ನೀವು ಏತಕ್ಕೆ ತೊಂದರೆ ಮಾಡುತ್ತೀರಿ?

ಶ್ರೀ ಮಿರಾಜುದ್ದೀನ್ ಪಟೇಲ್:- ಮಾನ್ಯ ಅಧ್ಯಕ್ಷರೇ, ಒಂದು ಸಲ ಶಾಸಕರು ಹೇಳಿದ ಪ್ರಕಾರ ಚೀಫ್ ಆಫೀಸರನ್ನು ಬದಲಾವಣೆ ಮಾಡಿ ಅವರು ಪ್ರೊಪೋಸ್ ಮಾಡಿದ ಹೆಸರನ್ನು ಹಾಕಿದ್ದೆವು. ಕೋರ್ಟಿನಿಂದ ಅದು ಸ್ಟೇ ಆಗಿರುವುದರಿಂದ ಕ್ಯಾನ್ಸಲ್ ಆಗಿದೆ. ಹದಿನೈದು ದಿವಸದಲ್ಲಿ ಡಿಪಾರ್ಟ್‌ಮೆಂಟಲ್ ಎನ್‌ಕ್ವೈರಿ ಮಾಡಿ ಆಪಾದನೆಗಳು ಸಾಬೀತಾದರೆ, ಬದಲಾವಣೆ ಮಾಡುತ್ತೇವೆ ಎಂದು ಹೇಳುತ್ತಿದ್ದೇನೆ. ಹದಿನೈದು ದಿವಸ ಟೈಮ್ ಕೇಳಿದ್ದೇನೆ.

ಉಪಾಧ್ಯಕ್ಷರು:- ಹದಿನೈದು ದಿವಸದಲ್ಲಿ ಮಾಡುತ್ತೇನೆ ಎಂದು ಹೇಳಿದ್ದಾರೆ.

ಶ್ರೀ ವಾಟಾಳ್ ನಾಗರಾಜ್:- ಇಲ್ಲಿ ನಡೆಯುತ್ತಿರುವ ವರ್ಗಾವರ್ಗಿ ಯಾರ ಪರವಾಗಿ ನಡೆಯುತ್ತೆದೆಂದರೆ ಜನತಾದಳದ ಶಾಸಕರು ಹೇಳಿದ ಪ್ರಕಾರವೇ ವರ್ಗಾವರ್ಗಿ ನಡೆಯುತ್ತಿರುವುದು. ಅದರಲ್ಲೇನೂ ಅನುಮಾನ ಇಲ್ಲ, ಇದು ಸತ್ಯ. ಇದರ ಬಗ್ಗೆ ಸುದೀರ್ಘವಾಗಿ ನಾನು ಚರ್ಚೆ ಮಾಡುವುದಕ್ಕೆ ಎಲ್ಲಾ ತಂದಿದ್ದೇನೆ, ಹೇಳುತ್ತೇನೆ. ಅವರು ಹೇಳಿದ್ದು ಅಂದರೆ ವೇದವಾಕ್ಯ. ಅವರು ಎಂಥವರೇ ಆಗಿರಲಿ. ಈ ಕಡೆ ಇರತಕ್ಕ ಯಾವ ಸದಸ್ಯರು ಹೇಳಿದರೂ ಒಬ್ಬರನ್ನೂ ಯಾವ ಇಲಾಖೆಯಲ್ಲೂ ವರ್ಗ ಮಾಡುವುದಿಲ್ಲ, ಇದು ಸತ್ಯ. ಆದ್ದರಿಂದ ರಾಜೇಂದ್ರನ್ ಅವರು ಏನು ಹೇಳುತ್ತಿದ್ದಾರೆ ಅದು ನೂರಕ್ಕೆ ನೂರು ಸರಿ. ಇದೊಂದೇ ಅಲ್ಲ, ಈ ಪುರಸಭೆಯ ಹಣಕಾಸಿನ ಬರಹ ಕೊಲೆ ಮಾಡುವ ಮಟ್ಟಕ್ಕೆ ಬೀದಿಯಲ್ಲಿ ಬಂದಿದೆಯೆಂದರೆ ಇನ್ನೂ ಹದಿನೈದು ದಿವಸ ಆದಮೇಲೆ ವರದಿ ತರಿಸಿ ಕ್ರಮ ತೆಗೆದುಕೊಳ್ಳುತ್ತೇನೆ ಎಂದರೆ ಇನ್ನು ಎಷ್ಟು ಕೊಲೆಯಾಗಬೇಕು ಹೇಳಿ. ಇನ್ನೂ ಒಂದೆರಡು ಕೊಲೆ ಆಗಬೇಕಾ? ಅದಾದ ಮೇಲೆ ವರದಿ ತರಿಸಿಕೊಳ್ಳುತ್ತೀರಾ? ಏನಾಗಬೇಕು ಹೇಳಿ. ಈಗ ಈ ವಿಚಾರ ಕೋರ್ಟಿನಲ್ಲಿದ್ದರೆ ಬೇರೊಬ್ಬ ಅಧಿಕಾರಿಯನ್ನು ಹಾಕುವುದಕ್ಕಾಗುವುದಿಲ್ಲವೆ? ಯಾರನ್ನಾದರೂ ಹಾಕಿ ಸ್ವಾಮಿ ನೀವು ಇವರು ಹೇಳಿದ್ದು ಹಾಕಬೇಡಿ, ಪರಿಶುದ್ಧವಾಗಿರುವವರು ಒಬ್ಬರನ್ನು ಹಾಕಿ.

ಉಪಾಧ್ಯಕ್ಷರು:- ನಾಗರಾಜ್‌ರವರೇ ತಾವು ದಯಮಾಡಿ ಸಹಕರಿಸಬೇಕು. ಇದು ಗಮನ ಸೆಳೆಯುವ ಸೂಚನೆ. ಈಗಾಗಲೆ ಉತ್ತರ ಕೊಟ್ಟಿದ್ದಾರೆ. ಈಗ ನಿಯಮ 351ರ ಅಡಿಯಲ್ಲಿ ಸದನದಲ್ಲಿ ಉತ್ತರಿಸುವ ಪ್ರಶ್ನೆಗಳು. ಯೋಗೀಶ ಭಟ್ ಅವರು.

ಶ್ರೀ ಎನ್. ರಾಜೇಂದ್ರನ್:- ದಯವಿಟ್ಟು ಅವರು ಹೇಳಲಿ. ಸ್ವಾಮಿ, ತಮಗೆ ಹೇಳುತ್ತೇನೆ. Hon'ble Chief Minister has signed to post one Sri Hanumanthappa to KGF. Why he has not been posted? Is it with malafide intention or with bonafide intention? ದಯವಿಟ್ಟು ಮೊದಲು ಉತ್ತರ ಕೊಡಲಿ. ಪೋಸ್ಟಿಂಗ್ ಮಾಡುತ್ತೇವೆಂದು ಹೇಳಲಿ ಸ್ವಾಮಿ ಅವರು.

ಉಪಾಧ್ಯಕ್ಷರು:- ಹೇಳಿದ್ದಾರಲ್ಲ.

ಶ್ರೀ ಎನ್. ರಾಜೇಂದ್ರನ್:- ನಾನು ಡೆಪ್ಯುಟಿ ಕಮಿಷನರ್ ಕೇಳಲಿಲ್ಲ. ಕಮೀಷನರ್ ಕೇಳುತ್ತಿದ್ದೇನೆ.

ಉಪಾಧ್ಯಕ್ಷರು:- ಇನ್ನೊಮ್ಮೆ ಹೇಳಿಬಿಡಿ ಸ್ವಾಮಿ ತಾವು.

ಶ್ರೀ ಎನ್. ರಾಜೇಂದ್ರನ್:- ಮುಖ್ಯಮಂತ್ರಿಗಳು ಹನುಮಂತಪ್ಪನವರನ್ನು ಕೆ.ಜಿ.ಎಫ್.ಗೆ ಪೋಸ್ಟ್ ಮಾಡಿ ಎಂದು ಬರೆದಿದ್ದಾರೆ.

ಉಪಾಧ್ಯಕ್ಷರು:- ಕೋರ್ಟಿನಿಂದ ಸ್ಟೇ ಆಗಿದೆ ಎಂದು ಹೇಳಿದ್ದಾರಲ್ಲ. ಈಗ ಯೋಗೀಶ ಭಟ್ ಅವರು. 351ರ ಅಡಿಯಲ್ಲಿ ಸದನದಲ್ಲಿ ಉತ್ತರಿಸುವ ಪ್ರಶ್ನೆಗಳು.

ಶ್ರೀ ಎನ್. ರಾಜೇಂದ್ರನ್:- ಅಧ್ಯಕ್ಷರೆ ನನಗೆ ಉತ್ತರವೇ ಕೊಟ್ಟಿಲ್ಲ. ಕಮಿಷನರ್ ಪೋಸ್ಟ್ ಮಾಡುತ್ತೇನೆಂದು ಒಂದು ಮಾತು ಹೇಳಲಿಲ್ಲ. ಸುಮ್ಮನೆ ಕುಳಿತುಕೊಂಡಿದ್ದಾರೆ. ಮಾತನಾಡಿ.

ಉಪಾಧ್ಯಕ್ಷರು:- ಇನ್ನೊಮ್ಮೆ ಹೇಳಿ.

ಶ್ರೀ ಮಿರಾಜುದ್ದೀನ್ ಪಟೇಲ್:- ಅವರು ಯಾವ ಕಮಿಷನರನ್ನು ಪ್ರೊಪೋಸ್ ಮಾಡಿರುವುದು?

ಶ್ರೀ ಎನ್. ರಾಜೇಂದ್ರನ್:- ಹನುಮಂತಪ್ಪ ಅವರನ್ನು ಪೋಸ್ಟ ಮಾಡಿ ಎಂದು ಹೇಳಿದ್ದು ನಿಮ್ಮ ಮುಖ್ಯ ಮಂತ್ರಿಗಳು.

ಶ್ರೀ ಮಿರಾಜುದ್ದೀನ್ ಪಟೇಲ್:- ಮಾನ್ಯ ಸದಸ್ಯರು ಹೇಳಿದ ಅದೇ ಅಧಿಕಾರಿಯನ್ನು ಪೋಸ್ಟಿಂಗ್ ಮಾಡಿದ್ದೆವು. ಕೋರ್ಟ್ ಸ್ಟೇ ಆರ್ಡರ್‌ನಿಂದಾಗಿ ಅದು ಕ್ಯಾನ್ಸಲ್ ಆಗಿದೆ.

SRI N. RAJENDRAN:- It is very clearly said by the Principal Secretary that there is no Court Stay Order in this regard.

ಶ್ರೀ ಮಿರಾಜುದ್ದೀನ್ ಪಟೇಲ್:- ಮುನಿಸಿಪಾಲಿಟಿ ಸೂಪರ್‌ಸೀಡ್ ಮಾಡಿ ಎಂದು ಹೇಳುತ್ತಾರೆ. ಸೂಪರ್‌ಸೀಡ್ ಮಾಡುವುದಕ್ಕೆ ಛಾರ್ಜಸ್ ಬೇಕಲ್ಲ. ಏನೂ ಛಾರ್ಜಸ್ ಇಲ್ಲದೆ ಸೂಪರ್‌ಸೀಡ್ ಹೇಗೆ ಮಾಡುವುದಕ್ಕೆ ಬರುತ್ತದೆ?

ಶ್ರೀ ಎನ್. ರಾಜೇಂದ್ರನ್:- ಅವರೇ ನಿಮಗೆ ಸೂಪರ್‌ಸೀಡ್ ಮಾಡುವುದಕ್ಕೆ ಅವಕಾಶ ಕೊಡುತ್ತಿದ್ದಾರೆ.

ಶ್ರೀ ಮಿರಾಜುದ್ದೀನ್ ಪಟೇಲ್:- ಚೀಫ್ ಆಫೀಸರ್‌ದು ಏನಾದರೂ ತಪ್ಪಿದ್ದರೆ ಎನ್‌ಕ್ವೈರಿ ಮಾಡಿಸಿ ನಾವು ಮಾಡುತ್ತೇವೆ.

ಶ್ರೀ ಹೆಚ್. ಶಿವಪ್ಪ:- ಸ್ವಾಮಿ, ನನ್ನ ಪಾಯಿಂಟ್ ಆಫ್ ಆರ್ಡರ್. ಇದೇನು ಕ್ವೆಶ್ಚನ್ ಹವರಾ ಅಥವಾ ಕಾಲಿಂಗ್ ಅಟೆನ್‌ಷನ್ನಾ?

ಉಪಾಧ್ಯಕ್ಷರು:- ಅದು ಮುಗಿಯಿತಲ್ಲ. ಈಗ ದಯಮಾಡಿ ಸಹಕರಿಸಿ. ಈಗ ನಿಯಮ 351ರ ಅಡಿಯಲ್ಲಿ ಸದನದಲ್ಲಿ ಉತ್ತರಿಸುವ ಪ್ರಶ್ನೆಗಳು.

ಶ್ರೀ ವಾಟಾಳ್ ನಾಗರಾಜ್:- ಈ ಕಷ್ಟ ಶಿವಪ್ಪನವರಿಗೆ ಆಗಿಲ್ಲ. ಶಿವಪ್ಪನವರಿಗೆ ಆಗಿದ್ದರೆ ಗೊತ್ತಾಗುತ್ತಿತ್ತು.

ಉಪಾಧ್ಯಕ್ಷರು:- ಆಯಿತು ಕೂಡ್ರಿ.

ಶ್ರೀ ಎನ್. ರಾಜೇಂದ್ರನ್:- ಅಧ್ಯಕ್ಷರೆ...

ಉಪಾಧ್ಯಕ್ಷರು:- ಹೇಳಿದ್ದಾರೆ. ಎಷ್ಟು ಸಾರಿ ಹೇಳುವುದು? ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಹೇಳಿದ್ದಾರೆ.

ಶ್ರೀ ಎನ್. ರಾಜೇಂದ್ರನ್:- ಏನು ಹೇಳಿದ್ದಾರೆ ಹೇಳಿ. ಅವರು ಉತ್ತರ ಕೊಡಲಿ. ಕಮಿಷನರ್ ಹಾಕುತ್ತೇವೆಂದರೆ ಕುಳಿತುಕೊಳ್ಳುತ್ತೇನೆ.

ಉಪಾಧ್ಯಕ್ಷರು:- ಕ್ರಮ ತೆಗೆದುಕೊಳ್ಳುತ್ತೇನೆಂದು ಹೇಳಿದ್ದಾರಲ್ಲ. ಇಲ್ಲೇ ತೆಗೆದುಕೊಳ್ಳುವುದಕ್ಕಾಗುತ್ತದಾ?

ಶ್ರೀ ಎನ್. ರಾಜೇಂದ್ರನ್:- ಇಲ್ಲ ಸ್ವಾಮಿ. ಸ್ಪೆಸಿಫಿಕ್ಕಾಗಿ ಹೇಳಲಿ. He should specifically say that he is a posting Sri Hanumanthappa to KGF as Municipal Commissioner or that he will supersede the municipal administration in KGF. ಎಲ್ಲಾ ದಾಖಲೆ ತಂದಿದ್ದೇನೆ.

ಶ್ರೀ ಹೆಚ್. ಶಿವಪ್ಪ:- ಇದು ಸಾಧ್ಯವೇ ಸ್ವಾಮಿ?

ಶ್ರೀ ಎನ್. ರಾಜೇಂದ್ರನ್:- ಏತಕ್ಕೆ ಸಾಧ್ಯವಿಲ್ಲ? ಏತಕ್ಕೆ ಸಾಧ್ಯವಿಲ್ಲ ಸ್ವಾಮಿ? ಒಬ್ಬ ಲೆಜಿಸ್ಲೇಟರ್ ಕೇಳಿದರೆ ಆಗುವುದಿಲ್ಲವೇ?

ಉಪಾಧ್ಯಕ್ಷರು:- ಶಿವಪ್ಪನವರೇ, ದಯಮಾಡಿ ಕುಳಿತುಕೊಳ್ಳಿ.

SRI H. SHIVAPPA:- I am a member of this House. ನಾನೂ ಹೇಳುತ್ತೇನೆ. ಯಾವುದು ನಡೆಯಬೇಕೋ ಅದು ನಡೆಯಬೇಕು. ನಡೆಯದೇ ಇರುವುದು ನಡೆಯುವುದಕ್ಕಾಗುತ್ತದೆಯೆ? ಇಲ್ಲೇ ಪೋಸ್ಟಿಂಗ್ ಆರ್ಡರ್ ಕೊಡುವುದಕ್ಕಾಗುತ್ತದೆಯೆ? ಅವರು ಕಾಲಿಂಗ್ ಅಟೆನ್‌ಷನ್ ಮೋಷನ್ ಮೂವ್ ಮಾಡಿದ್ದಾರೆ. ಇದು ಕ್ವೆಶ್ಚನ್ ಹವರ್ ಅಲ್ಲ.

8. ನಿಯಮ 351ರ ಮೇರೆಗೆ

ಅ) ಬೆಂಗಳೂರು ಬಸ್ ನಿಲ್ದಾಣಕ್ಕೆ ಶಿವಾಜಿನಗರದ ಮೂಲಕ ಹಳೇ ಬೈಯಪ್ಪನ ಹಳ್ಳಿ ಮತ್ತು ಕೃಷ್ಣ ರಾಜ ಮಾರುಕಟ್ಟೆಗೆ ಸಾರಿಗೆ ಸೌಲಭ್ಯ.

ಶ್ರೀ ಕೆ. ರಾಮಲಿಂಗಾರೆಡ್ಡಿ (ಜಯನಗರ) (ಯೋಗೇಶ್ ಭಟ್ ರವರ ಪರವಾಗಿ):- ಮಾನ್ಯ ಸಭಾಧ್ಯಕ್ಷರೆ, ಬೆಂಗಳೂರು ಬಸ್ ನಿಲ್ದಾಣಕ್ಕೆ ಶಿವಾಜಿನಗರದ ಮೂಲಕ ಹಳೇ ಬೈಯ್ಯಪ್ಪನ ಹಳ್ಳಿ ಹಾಗೂ ಕೃಷ್ಣ ರಾಜ ಮಾರುಕಟ್ಟೆಗೆ ಸಾರಿಗೆ ಸೌಲಭ್ಯ ಒದಗಿಸುವ ಬಗ್ಗೆ ಮಂತ್ರಿಗಳು ಹೇಳಿಕೆ ನೀಡಬೇಕೆಂದು ಕೇಳಿಕೊಳ್ಳುತ್ತೇನೆ.